<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾದಂ.ನ್ಯಾಯಾಲಯ,</u>

<u>ಶಹಾಪೂರ.</u>

ಸಿ.ಡಬ್ಲ್ಯೂ2 ಪಿ.ಡಬ್ಲ್ಯೂ5

<u>ಸಿ.ಸಿ. ನಂ. 850/2025</u>

ಹೆಸರು ಃ ಮಲ್ಲಿಕಾರ್ಜುನ
ತಂದೆ ಹೆಸರು ಃ ನೀಲು ಪವಾರ್
ವಯಸ್ಸು ಃ 37 ವರ್ಷ
ಉದ್ಯೋಗ ಃ ಚಾಲಕ
ವಾಸ ಃ ಹೊತಪೇಟ್

<u>ದಿನಾಂಕ **25.05.2026**</u>
<u>ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.</u>
<u>ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ</u>

ನನಗೆ ಚಾಸಾ3 ಹಾಗೂ ಆರೋಪಿಯ ಪರಿಚಯ ಇರುವುದಿಲ್ಲ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಜಪ್ತಿ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ಮದ್ಯದ ಪೌಚಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನಿಪಿ.1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.1(ಸಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ದಿನಾಂಕಃ 05-07-2025 ರಂದು ಸಾಯಂಕಾಲ 5.15 ರಿಂದ 6.15 ರ ಸಮಯದಲ್ಲಿ ಶಿರವಾಳ ಗ್ರಾಮದ ಗ್ರಾಮ ಪಂಚಾಯತ್ ಹತ್ತಿರ ನನ್ನ ಹಾಗೂ ಚಾಸಾ3 ರವರ ಸಮಕ್ಷಮ ಪೊಲೀಸರು ನಿಪಿ.1 ರಂತೆ ಪಂಚನಾಮೆಯನ್ನು ಮಾಡಿ ಆರೋಪಿಯಿಂದ 34 OC ವಿಸ್ಕಿಯ ಪೌಚಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿತನೊಂದಿಗೆ ರಾಜಿ ಆಗಿರುತ್ತೇನೆ ಎಂದರೆ ಸರಿ. ನನಗೆ ನಿಪಿ.1 ರ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.